ಪಿ ಡಬ್ಲ್ಯೂ ಃ **1 -**

ಸಾಕ್ಷಿಗೆ ದಿನಾಂಕಃ **24.03.2026** ರಂದು ಪ್ರಮಾಣ ವಚನ ಬೋಧಿಸಲಾಯಿತು**.**

ಮುಂದುವರೆದ ಪಾಟೀ ಸವಾಲು**:** ಎದುರುದಾರರ ಪರ **:** ಶ್ರೀ ಕೆ**.**ವಿ**.**ಎಸ್**.** ವಕೀಲರಿಂದ**:**

ನಿಪಿ 11 ರಲ್ಲಿ ನಂಜೇಗೌಡರವರ ಮೊದಲನೇ ಪತ್ನಿ ಎಂದು ಬರೆಸಿರುವುದು ತಪ್ಪಾಗಿರುತ್ತದೆ. ನನ್ನ ಅಜ್ಜಿಯ ಹೆಸರು ಚೆನ್ನಮ್ಮ. ನನ್ನ ತಾತ ನಂಜೇಗೌಡರವರಿಗೆ ಮಾದಮ್ಮ ಎಂಬ ಪತ್ನಿ ಇರಲಿಲ್ಲ. ಚೆನ್ನಮ್ಮರವರು ನನ್ನ ತಾತನ ಮೊದಲನೇ ಪತ್ನಿ ಎಂದರೆ ಸರಿ. ನಂಜಮ್ಮ ಎಂಬುವವರು ಇಬ್ಬರು ಇದ್ದು, ಅವರು ನನ್ನ ತಾಯಿ ಮತ್ತೊಬ್ಬರು ನನ್ನ ಸೋದರ ಅತ್ತೆ ಆಗಿರುತ್ತಾರೆ. ನನ್ನ ತಾತ ನಂಜೇಗೌಡರವರ ಮರಣ ಪ್ರಮಾಣ ಪತ್ರವನ್ನು ನಾನು ಪ್ರಯತ್ನಿಸಿರುವುದಿಲ್ಲ. ದಿ: 15.07.1960 ರಂದು ನನ್ನ ತಾತ ನಂಜೇಗೌಡರವರ ಮೃತರಾಗಿರುತ್ತಾರೆ. ಕುಂದೂರು ಗ್ರಾಮದ ನಾರಾಯಣ ಪರಿಚಯವಿದ್ದು, ಪುಟ್ಟೇಗೌಡ, ವೆಂಕಟೇಶ ಮತ್ತು ನಂಜೇಗೌಡರವರ ಪರಿಚಯವಿರುವುದಿಲ್ಲ. ಅದೇ ಗ್ರಾಮದ ರಮೇಶ.ಮಂಜೇಗೌಡ, ರಾಮಚಂದ್ರೇಗೌಡ ಮತ್ತು ದಾಸೇಗೌಡರವರ ಪರಿಚಯವಿರುವುದಿಲ್ಲ. ನಿಪಿ 13 ನನ್ನ ಪ್ರಕಾರ ತಪ್ಪಾಗಿರುತ್ತದೆ. 2022-23 ನೇ ಸಾಲಿನಲ್ಲಿ ನಿಪಿ 13 ನ್ನು ನಾನು ಓದಿದಾಗ ಅದು ತಪ್ಪಾಗಿರುವುದು ನನ್ನ ಗಮನಕ್ಕೆ ಬಂದಿರುತ್ತದೆ. ನಿಪಿ 13 ತಪ್ಪಾಗಿದೆ ಎಂದು ಅದನ್ನು ಸರಿಪಡಿಸುವಂತೆ ನಾನು ಯಾವುದೇ ಪ್ರಾಧಿಕಾರದ ಮುಂದೆ ಅರ್ಜಿಯನ್ನು ಸಲ್ಲಿಸಿರುವುದಿಲ್ಲ.

2. ನಿಪಿ 13 ತಪ್ಪಾಗಿರುವ ಬಗ್ಗೆ ಸದರಿ ದಾಖಲೆಗೆ ಸಹಿ ಮಾಡಿರುವ ಮೇಲೆ ಹೇಳಿದ ನಾರಾಯಣ ರವರ ಮುಂದೆ ಪ್ರಸ್ತಾಪ ಮಾಡಿರುವುದಿಲ್ಲ. ನಿಪಿ 14 ರಲ್ಲಿ ಇರುವ ಚೆನ್ನಮ್ಮರವರ ತಾಯಿ ಮತ್ತು ತಂದೆಯ ಹೆಸರು ಹೀರಮ್ಮ ಮತ್ತು ಜವರೇಗೌಡ ಎಂದು ನಮೂದಾಗಿದ್ದು, ಅದು ಸರಿ ಇರುತ್ತದೆ. ಸದರಿ ಚೆನ್ನಮ್ಮರವರಿಗೆ ಮಕ್ಕಳು ಇರುವುದಿಲ್ಲ. ಸದರಿ ಚೆನ್ನಮ್ಮರವರು ನನ್ನ ತಂದೆಯ 2 ನೇ ಪತ್ನಿ ಎಂದರೆ ಸರಿ. ನನ್ನ ತಂದೆಯ ಮೊದಲನೇ ಪತ್ನಿ ನಂಜಮ್ಮ ನನ್ನ ತಾಯಿ ಎಂದರೆ ಸರಿ. ನನ್ನ ತಾತ ನಂಜೇಗೌಡರವರಿಗೆ ಚೆನ್ನಮ್ಮ ಎಂಬ ಒಬ್ಬರೇ ಮಗಳು ಎಂದರೆ ಇಬ್ಬರು ಇರುತ್ತಾರೆ. ನನ್ನ ತಾತನಿಗೆ ನನ್ನ ತಂದೆ ಮತ್ತು ನನ್ನ ಸೋದರ ಅತ್ತೆ ನಂಜಮ್ಮ ಮಕ್ಕಳಾಗಿರುತ್ತಾರೆ. ನಂಜಮ್ಮರವರ ಪತಿಯ ಹೆಸರು ಮರಿಮಾದೇಗೌಡ ಆಗಿದ್ದು, ಅವರು ಕುಂದೂರಿನಲ್ಲಿ ಇದ್ದರು. ನಂಜೇಗೌಡರವರ ಪತ್ನಿ ಚೆನ್ನಮ್ಮ ಹಿಟ್ಟನಹಳ್ಳಿ ಕೊಪ್ಪಲು ಗ್ರಾಮದವರು ಎಂದರೆ ಸರಿ. ನನ್ನ ತಾಯಿಯ ಮನೆ ಮಳವಳ್ಳಿಯಲ್ಲಿ ಇರುತ್ತದೆ. ನನ್ನ ತಾಯಿಯ ಅತ್ತೆ ಮಾದಮ್ಮ ಮಳವಳ್ಳಿಯವರು ಎಂದರೆ ಸರಿಯಲ್ಲ.

3. ನಿಪಿ 15 ರಲ್ಲಿ ಇರುವ ನಂಜಮ್ಮರವರು ನನ್ನ ತಾತನ 2 ನೇ ಪತ್ನಿ ಮಗಳು ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ಹೆಸರು ಇರುವಯಾವುದೇ ದಾಖಲೆಯನ್ನು ಪಡೆಯಲು ನಾನು ಪ್ರಯತ್ನಿಸಿರುವುದಿಲ್ಲ. ನನ್ನ ತಾತನ ಮೊದಲನೇ ಪತ್ನಿ ಎಂದು ತಿಳಿಯುತ್ತದೆ ಎಂಬ ಕಾರಣದಿಂದ ದಾಖಲೆಯನ್ನು ಪಡೆಯಲು ಪ್ರಯತ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 16 ರಲ್ಲಿ ಇರುವ ಚೆನ್ನಮ್ಮರವರು ನನ್ನ ತಾತನ 2 ನೇ ಪತ್ನಿ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ನಂಜಮ್ಮರವರು ಸಹೋದರ ಸಹೋದರಿ ಎಂದು ತೋರಿಸಲು ದಾಖಲೆಯನ್ನು ಪಡೆಯಲು ನಾನು ಪ್ರಯತ್ನಿಸಿರುವುದಿಲ್ಲ. ನಿಪಿ 10 ರಿಂದ 16 ದಾಖಲೆಗಳು ಎದುರುದಾರರಿಗೆ ಅನುಕೂಲವಾಗಿದ್ದು, ನನಗೆ ಅನಾನುಕೂಲ ಎಂದರೆ ಸರಿ.

ಮರುವಿಚಾರಣೆ ಇರುವುದಿಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಮಳವಳ್ಳಿ.